

ಪುರೋಷತ್ತಮನೆಂದು ಬಿಂಬಿತನಾಗಿದ್ದ ಆ ಜೀವಿಯ ಪ್ರತಿಮೆಯಲ್ಲಿ ಕಾಲದ ಸವೆತ ಸಂಘರ್ಷಗಳ ಕುರುಹಿಲ್ಲ. 'ಇದು...?' ಅಂತ ಲೊಚಗೊಟ್ಟದೆ ಬೆರಗಾಗಿ.

'ಹ್ಞಾ...! ನಮ್ಮ ಪುಣ್ಯಪುರುಷನ ಓಲ್ಡ್ ಏಕ ಶಿಲಾವಿಗ್ರಹ ಅಂತೆ ಸ್ವಾಮೀ...! ಐದನೆಯ ಶತಮಾನದ ಕಾಲದ್ದಂತೆ. ಮೊನ್ನೆ ಕೆರ್ವಾಜೆ ಎಕ್ಸವೇಷನ್ ಟೈಮಲ್ಲಿ ಸಿಕ್ಕಿದ್ದು ಆಯ್ತಾ...?! ಹಾಗೇ ಹುಡುಕಿಟ್ಟದ್ದನ್ನೆಲ್ಲ ತಂದು ಇಲ್ಲಿ ಗುಡ್ಡೆ ಹಾಕ್ತಾ ಇದ್ದಾರೆ... ಆದರೆ, ಬೇರೆ ಕಲ್ಲುಗಳಿಗೆ ಒಮ್ಮೆ ಕಂಪೇರ್ ಮಾಡಿ ನೋಡಿ... ಈ ಶಿಲೆ ನಿಮ್ಗೆ ಆ ಪುರಾತನ ಕಾಲದ್ ಹಾಗೇ ಕಾಣ್ತದ?'

ಇಲ್ಲ. ಖಂಡಿತ ಇಲ್ಲ. ನಿನ್ನೆಯಷ್ಟೇ ಫ್ರೆಶ್ ಆಗಿ ಕಲ್ಲಿನಲ್ಲಿ ಕಡೆದು, ಪಾಲಿಶ್ ಹಾಕಿ ಸಾರ್ವಜನಿಕ ಅನಾವರಣಕ್ಕೆ ಸಿದ್ಧಪಡಿಸಿದ ಬಹು ದೊಡ್ಡ ಬಜೆಟ್ಟಿನ ಪ್ರತಿಮೆಯಂತೆ ಕಾಣುತ್ತಾ ಇದ್ದ ದೇವಮಾನವನ ಮೂರ್ತಿಯದು. ನನ್ನ ಮುಖದ ಗೆರೆಗಳನ್ನು ನೋಡಿ ಭಾವಗಳನ್ನು ಅರಿತಂತೆ ಹಯವದನ ಹೇಳಿದ, 'ಒಮ್ಮೆ ಆ ಮುಖ ನೋಡಿ, ಅವತಾರ ಪುರುಷನ ಮುಖದಲ್ಲಿ ಇರುವ ಯೋಗಿಯ ಪ್ರಭೆ ಈ ದೇವರಲ್ಲಿ ಕಾಣ್ತದಾ?' ಅಂದ.

ನಾನು ಕತ್ತು ಎತ್ತಿ ಇನ್ನೂ ಹತ್ತಿರ ನಿಂತು ಆ ಶಿಲೆಯನ್ನು ಆಳವಾಗಿ ಧೇನಿಸಿದೆ. ಬಲಗೈಯಲ್ಲಿ ಕ್ರಿಶ್ಚಿಯನ್ ಧರ್ಮಯುದ್ಧದಲ್ಲಿ ಕ್ರೂಸೇಡರು ಹಿಡಿಯುತ್ತಿದ್ದಂತಹ ಮಹಾ ಖಡ್ಗ, ಆ ಖಡ್ಗಕ್ಕೆ ಸುತ್ತು ಹಾಕಿರುವ ಕಾಳಿಂಗ ಸರ್ಪ. ಕ್ರೌರ್ಯದಲ್ಲಿ ಮಿನುಗುತ್ತಿದ್ದ ಕಣ್ಣುಗಳು, ಮುಡಿ ಬಿಚ್ಚಿದ ನೀಳ ಕೂದಲಿನ ನಟ್ಟ ನಡುವಿನಿಂದ ಫೂತ್ಕರಿಸುತ್ತಿರುವ ಕರಿ ನಾಗ, ನರಭಕ್ಷಕ ಸಿಂಹ ಗರ್ಜಿಸುತ್ತಾ ಇರುವಂತೆ ಇಬ್ಭಾಗವಾಗಿರುವ ಆತನ ತುಟಿ, ಡ್ರಾಕುಲದ ಕೋರೆಯಂತೆ ಆಚೆ ಬಂದಿದ್ದ ಎರಡು ಹಲ್ಲುಗಳು, ಪಶ್ಚಿಮ ದಿಕ್ಕಿಗೆ ಮುಖ ಮಾಡಿ ನಿಂತಿದ್ದ ಈ ದೈವಾಂಶ ಸಂಭೂತ 'ಏಳಿ ಎದ್ದೇಳಿ, ಶತ್ರುಗಳನ್ನು ಸೀಳಿ ಹಾಕುವತನಕ ಮಲಗದಿರಿ' ಎಂದು ಆಗ್ರಹಿಸಿದಂತಿತ್ತು.